# ಮೀನುಗಾರಿಕೆಯ ವಿಷಯದಲ್ಲಿ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

## ತರಬೇತಿ 01: ಅಕ್ವೇರಿಯಂ ಜೋಡಣೆ ಮತ್ತು ನಿರ್ವಹಣೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಮಂಗಳೂರಿನ ಮೀನುಗಾರಿಕಾ ಕಾಲೇಜಿನ ಹ್ಯೊಗೆಬರ್ಝಾರ್‌ನ ಆವರಣದಲ್ಲಿರುವ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಪ್ರಾಯೋಜಿತ ಯೋಜನೆಯಾದ **'ಮೀನುಗಾರಿಕೆಯಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಸುರಕ್ಷತಾ ತರಬೇತಿ ಕೇಂದ್ರ**' ದಲ್ಲಿ ಫೆಬ್ರವರಿ 01 ರಿಂದ ಒಟ್ಟು 30 ದಿನಗಳವರೆಗೆ ಉಚಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಈ ಮೊದಲ 01 ನೇ ತರಬೇತಿಯಲ್ಲಿ ಅಕ್ವೇರಿಯಂ ಜೋಡಣೆ, ನಿರ್ವಹಣೆ, ಅಲಂಕಾರಿಕಾ ಮೀನುಗಳ ಸಾಕಣೆ, ಮರಿ ಉತ್ಪಾದನೆ, ಉದ್ಯಮಶೀಲತೆ, ಮಾರಾಟ, ಇತ್ಯಾದಿಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ತರಬೇತಿ ನೀಡಲಾಗುವುದು.

ಒಂದು ತರಬೇತಿಯಲ್ಲಿ ಒಟ್ಟು 30 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ನಿರುದ್ಯೋಗಿ ಪದವಿದರರು, ಕಾಲೇಜು ವ್ಯಾಸಂಗವನ್ನು ಮೊಟಕುಗೊಳಿಸಿರುವ ಯುವಕ–ಯುವತಿಯರು, ಸ್ವಉದ್ಯೋಗಾಂಕ್ಷಿಗಳು, ಸ್ವಯಿಚ್ಛೆಯಿಂದ ವ್ಯಾಪಾರ ಮಾಡಬಯಸುವ ಕರ್ನಾಟಕ ಕರಾವಳಿಯ ನಿವಾಸಿಗಳಿಂದ ತರಬೇತಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಕಾಲೇಜಿನ ವೆಬ್‌ಸೈಟ್: **www.cofm.edu.in** ಯಿಂದ ಡೌನ್‌ಲೋಡ್ ಮಾಡಿ ಇಮೇಲ್: **sdfstc2023@gmail.com** ಗೆ ಕಳುಹಿಸಲು ಕೋರಲಾಗಿದೆ. ಅರ್ಜಿಯನ್ನು ಜನವರಿ 25 ರೊಳಗೆ ಕಳುಹಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ ಯೋಜನೆಯ ಸಂಯೋಜಕರು ಹಾಗೂ ಪ್ರಧಾನ ಸಂಶೋಧಕರನ್ನು ಮೊಬೈಲ್ ಸಂಖ್ಯೆ: 99169 24084 ಅಥವಾ 86186 60949 ಗೆ ಸಂಪರ್ಕಿಸಬಹುದಾಗಿದೆ.